**ವಿಷಯ :- ಕೆ. ಎಸ್. ಆರ್. ಟಿ. ಸಿ. ಬಾಗಲಕೋಟೆ ವಿಭಾಗ ಕುರಿತು.**

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 393 (2943) ಶ್ರೀ ಬಿ. ಬಿ. ಚಿಮ್ಮನ ಕಟ್ಟಿ (ಬಾದಾಮಿ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಾಗಲಕೋಟೆ ವಿಭಾಗವು ಯಾವ ವರ್ಷದಲ್ಲಿ ಪ್ರಾರಂಭವಾಗಿದೆ? (ಎಷ್ಟು ಡಿಪೋಗಳೊಂದಿಗೆ)

ಆ) ಆಂದಿನಿಂದ ಇಂದಿನವರೆಗೆ ಟೈರ್, ಪ್ಲಾಂಟ್ ಹಾಗೂ ವಿಭಾಗೀಯ ವರ್ಕ್‌ಶಾಪ್ ಪ್ರತ್ಯೇಕ ಕಟ್ಟಡವಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಈ ವಿಭಾಗದಲ್ಲಿರುವ ಬಸ್ಸುಗಳನ್ನು ಸುವ್ಯವಸ್ಥೆಯಲ್ಲಿಡಲು ಲಾಭದಾಯಕವಾಗಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಬಾಗಲಕೋಟೆ ವಿಭಾಗವು ನವೆಂಬರ್ 1991 ರಂದು ಪ್ರಾರಂಭವಾಗಿ ಬಾಗಲಕೋಟೆ ಬಾದಾಮಿ ಮುದ್ದೇಬಿಹಾಳ ಹಾಗೂ ಇಳಕಲ್ ಎಂಬ ನಾಲ್ಕು ಘಟಕಗಳನ್ನು ಅದರ ಆಡಳಿತ ವ್ಯಾಪ್ತಿಯಲ್ಲಿ ಹೊಂದಿದೆ.

ಆ) ಬಾಗಲಕೋಟೆ ವಿಭಾಗ ಟೈರು ಘಕಟವನ್ನು ಹೊಂದಿರುವುದಿಲ್ಲ. ಬಾಗಲಕೋಟೆ ವಿಭಾಗದಲ್ಲಿ ತಾತ್ಕಾಲಿಕ ವಿಭಾಗ ಕಾರ್ಯಗಾರವನ್ನು ಬಾಗಲಕೋಟೆ ಘಟಕದ ಒಳಭಾಗದಲ್ಲಿ ಪ್ರಾರಂಭಿಸಿದ್ದು ಇಲ್ಲಿ ವಾಹನಗಳ ಸುಧಾರಣೆ ಹಾಗೂ ದುರಸ್ತಿಯನ್ನು ಮಾಡಲಾಗುವುದು.

ಇ) ಈಗಾಗಲೇ ತೀರ್ಮಾನಿಸಿರುವಂತೆ ಖಾಯಂ ವಿಭಾಗ ಕಾರ್ಯಗಾರವನ್ನು ಬಾಗಲಕೋಟೆಯಲ್ಲಿ 37 ಲಕ್ಷ ರೂ. ಗಳ ವೆಚ್ಚದಲ್ಲಿ ಘಟಕಕ್ಕೆ ಹೊಂದಿಕೊಂಡಿರುವ ಹಾಲಿ 3 ಎಕರೆ 15 ಗುಂಟೆ ಖಾಲಿ ನಿವೇಶನದಲ್ಲಿ ನಿರ್ಮಾಣ ಮಾಡಲಾಗುವುದು.

ಈ) ಬಾಗಲಕೋಟೆ ಭಾಗದ ನಾಲ್ಕು ಘಟಗಳಲ್ಲಿ ಹಾಗೂ ತಾತ್ಕಾಲಿಕ ವಿಭಾಗ ಕಾರ್ಯಗಾರದಲ್ಲಿ ವಾಹನಗಳ ಸುಧಾರಣೆ ಮತ್ತು ದುರಸ್ತಿಯ ವ್ಯವಸ್ಥೆ ಮಾಡಲಾಗಿದ್ದು, ಪ್ರಸ್ತುತವಾಗಿ ಘಟಕ ಮತ್ತು ವಿಭಾಗ ಕಾರ್ಯಗಾರಗಳಲ್ಲಿ ದುರಸ್ತಿಗೊಳಿಸಿ ವಾಹನಗಳನ್ನು ಸುಸ್ಥಿತಿಯಲ್ಲಿಡಲಾಗುತ್ತಿದೆ.

**ವಿಷಯ :- ರಾಜ್ಯದಲ್ಲಿ ಹನಿ ನೀರಾವರಿಯ ಕ್ಷೇತ್ರದ ವಿಸ್ತೀರ್ಣ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 401 (3042)

ಶ್ರೀ ಡಿ. ಆರ್. ಪಾಟೀಲ್ (ಗದಗ್) :- ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೀರಾವರಿ ಕ್ಷೇತ್ರವೆಷ್ಟು?

ಅ) ಹನಿ ನೀರಾವರಿಗೆ ಕಳೆದ 5 ವರ್ಷದಲ್ಲಿ ಸರ್ಕಾರ ನೀಡಿರುವ ಸಹಾಯಧನ ಎಷ್ಟು? (ವಾರ್ಷಿಕ ವಿವರ ನೀಡುವುದು.)

ಇ) ಪ್ರಸಕ್ತ ವರ್ಷ ಎಷ್ಟು ಕ್ಷೇತ್ರದಲ್ಲಿ ಹನಿ ನೀರಾವರಿ ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆ.

ಈ) ಈ ಉದ್ದೇಶಕ್ಕೆ 1995-96 ನೇ ಸಾಲಿನಲ್ಲಿ ಮೀಸಲಿರಿಸಿರುವ ಹಣವೆಷ್ಟು?

ಉ) ನೆರೆಯ ಮಹಾರಾಷ್ಟ್ರದಲ್ಲಿ 100 ರಷ್ಟು ನೆರವು ಹನಿ ನೀರಾವರಿಗೆ ನೀಡಲಾಗುತ್ತಿರುವಂತೆ ರಾಜ್ಯದಲ್ಲಿ ಸಹ ಮಹಾರಾಷ್ಟ್ರದಂತೆ ಪೂರ್ಣ ನೆರವು ನಿಡುವ ವಿಷಯ ಸರ್ಕಾರ ಪರಿಶೀಲಿಸುವುದೇ?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :-

ಅ) ರಾಜ್ಯದಲ್ಲಿ 11225 ಹೆಕ್ಟೇರ್ ತೋಟಗಾರಿಕೆ ಪ್ರದೇಶದಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಲಾಗಿದೆ.

ಅ) ಕಳೆದ ಐದು ವರ್ಷಗಳಲ್ಲಿ 1118.78 ಲಕ್ಷ ರೂಪಾಯಿಗಳ ಸಹಾಯಧನವನ್ನು ಪ್ರತಿ ವರ್ಷ ಈ ಕೆಳಕಂಡಂತೆ ನೀಡಲಾಗಿದೆ.

| | |
|---|---|
| 1990-91 (ಪ್ರಾಯೋಗಿಕ ಯೋಜನೆ) | ರೂ. 11.58 ಲಕ್ಷ |
| 1991-92 | ರೂ. 94.93 ಲಕ್ಷ |
| 1992-93 | ರೂ. 376.72 ಲಕ್ಷ |
| 1993-94 | ರೂ. 248.28 ಲಕ್ಷ |
| 1994-95 | ರೂ. 387.27 ಲಕ್ಷ |

ಇ) ಪ್ರಸಕ್ತ ವರ್ಷದಲ್ಲಿ 5100 ಹೆಕ್ಟೇರ್ ಪ್ರದೇಶದಲ್ಲಿ ಹನಿ ನೀರಾವರಿ ಅಳವಡಿಸಲು ಉದ್ದೇಶಿಸಲಾಗಿದೆ.

ಈ) 1995-96 ನೇ ಸಾಲಿನಲ್ಲಿ 795.00 ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ.

ಉ) ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

**ವಿಷಯ :- ಸಕಲೇಶಪುರಕ್ಕೆ ಬಸ್ ನಿಲ್ದಾಣ ಕುರಿತು.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 402 (3018)

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರದ ನಗರಕ್ಕೆ ಬಸ್ ನಿಲ್ದಾಣದ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?